[ Govt. of Karnataka C.R.P. 67]

Deposition Sheets (RP.No.57) Form No.4

**IN THE COURT OF Addl. CIVIL JUDGE & J.M.F.C., KARKALA.**

**Criminal Case No. 500/2023**

ಪಿ.ಡಬ್ಲ್ಯು : 5 ಸಿ.ಡಬ್ಲ್ಯು : 6

| | | |
|---|---|---|
| ಸಾಕ್ಷಿದಾರನ ಹೆಸರು | : | ಸತೀಶ ಆಚಾರ್ಯ |
| ತಂದೆಯ ಹೆಸರು | : | ಕೃಷ್ಣಯ್ಯ ಆಚಾರ್ಯ |
| ಪ್ರಾಯ | : | 35 ವರ್ಷ |
| ಉದ್ಯೋಗ | : | ಅಕ್ಕಸಾಲಿಗ |
| ವಾಸ | : | ಕಲ್ಯಾ |

ದಿನಾಂಕ 26.09.2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರುಃ-

1 ನೇ ಆರೋಪಿಯನ್ನು ನೋಡಿರುತ್ತೇನೆ. ಸಾಕ್ಷಿಯು 1 ನೇ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

ಚಾಸಾ-1 ರಿಂದ 3 ರವರ ಪರಿಚಯ ಇರುತ್ತದೆ.

ದಿಃ04.12.2022 ರಂದು ಪೊಲೀಸರು ಚಾಸಾ-1 ರವರ ಮನೆಗೆ ಚಿನ್ನ ಕಳ್ಳತನವಾದ ಬಗ್ಗೆ ಸ್ಥಳ ಮಹಜರು ಮಾಡಲು ಕರೆದಿರುತ್ತಾರೆ. ಸದ್ರಿ ಸ್ಥಳದಲ್ಲಿ ಪೊಲೀಸರು ಬರವಣಿಗೆ ಮಾಡಿ ಸಹಿ ಪಡೆದುಕೊಂಡಿರುತ್ತಾರೆ. ಪೊಲೀಸರು ಸದ್ರಿ ಸ್ಥಳದಲ್ಲಿ ಒಂದು ಪರ್ಸ್, ಒಂದು ಸ್ಟೀಲ್ ಡಬ್ಬ ಹಾಗೂ ಒಂದು ಬೀಗವನ್ನು ವಶಪಡಿಸಿಕೊಂಡಿರುತ್ತಾರೆ. ಸಾಕ್ಷಿಯು ಸ್ಥಳ ಮಹಜರು ಹಾಗೂ ಅದರಲ್ಲಿರುವ ತ್ನನ ಸಹಿಯನ್ನು ನೋಡಿ ಗುರುತಿಸಿದ್ದು ಸ್ಥಳ ಮಹಜರನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಕರಡು ನಕಾಶೆ ಹಾಗೂ ಅದರಲ್ಲಿರುವ ತ್ನನ ಸಹಿಯನ್ನು ನೋಡಿ ಗುರುತಿಸಿದ್ದು ಕರಡು ನಕಾಶೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು. ಸಾಕ್ಷಿಯು ಸ್ಥಳ ಮಹಜರು

ಸಮಯ ತೆಗೆದ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-4 ಮತ್ತು 5 ಎಂದು ಗುರುತಿಸಲಾಗಿದೆ. ಮಹಜರು ಸಮಯ ನನ್ನ ಸಮಕ್ಷಮ ಚಾಸಾ-7 ಚಂದ್ರಶೇಖರ್ ರವರು ಸಹಿ ಮಾಡಿರುತ್ತಾರೆ. ನನಗೆ ಪರ್ಸ್, ಸ್ಟೀಲ್ ಡಬ್ಬ ಹಾಗೂ ಬೀಗವನ್ನು ನೋಡಿದರೆ ಗುರುತಿಸಬಹುದು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಒಂದು ಪಿಂಕ್ ಬಣ್ಣದ ಪರ್ಸ್, ಒಂದು ಸ್ಟೀಲ್ ಡಬ್ಬ ಹಾಗೂ ಒಂದು ಮುರಿದ ಬೀಗವನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು ಮಾ-1 ರಿಂದ 3 ಎಂದು ಗುರುತಿಸಲಾಗಿದೆ.

ದಿಃ20.12.2022 ರಂದು ನನ್ನನ್ನು ವೃತ್ತ ನೀರಿಕ್ಷಕರ ಕಚೇರಿಗೆ ಕರೆದಿರುತ್ತಾರೆ. ಅಲ್ಲಿ 1 ನೇ ಆರೋಪಿ ಇದ್ದರು. ಪೊಲೀಸರು ಅವರಿಂದ ಒಪ್ಪೊ ಮೊಬೈಲ್ ಹಾಗೂ ಪಲ್ಸರ್ ಬೈಕ್ ಗಳನ್ನು ಸ್ವಾಧೀನಪಡಿಸಿಕೊಂಡಿರುತ್ತಾರೆ. ಆ ಸಂದರ್ಭದಲ್ಲಿ ಚಾಸಾ-9 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ಆರೋಪಿಯ ಅಂಗಜಪ್ತಿ ಹಾಗೂ ಸೊತ್ತು ಸ್ವಾ ಧೀನತ ಮಹಜರಿನಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹರಜನ್ನು ನಿಪಿ-23 ಎಂದು, ಸಾಕ್ಷಿಯ ಸಹಿಯನ್ನು ನಿಪಿ-23(ಎ) ಎಂದು ಗುರುತಿಸಲಾಯಿತು. ಮೊಬೈಲ್ ನ್ನು ಹಾಗೂ ಬೈಕ್ ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮೊಬೈಲ್ ನ್ನು ನೋಡಿ ಗುರುತಿಸಿದ್ದು ಅದನ್ನು ಮು ಮಾ-4 ಎಂದು ಗುರುತಿಸಲಾಯಿತು. ಸಾಕ್ಷಿಯು ಮೊಬೈಲ್ ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು. ಸಾಕ್ಷಿಯು ಬೈಕ್ ನ 2 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-25 ಎಂದು ಗುರುತಿಸಲಾಯಿತು.

ದಿಃ21.12.2022 ರಂದು ಬೆಳ್ತಂಗಡಿಯ 1 ನೇ ಆರೋಪಿಯ ಮನೆಗೆ ಕರೆದುಕೊಂಡು ಹೋಗಿದ್ದು 1 ನೇ ಆರೋಪಿಯು ತನ್ನ ಮನೆಯಲ್ಲಿದ್ದ ಚಿನ್ನವನ್ನು ಹಾಗೂ ಬೀಗವನ್ನು ಒಡೆಯಲು ಉಪಯೋಗಿಸಿದ ಒಂದು ಕಬ್ಬಿಣದ ರಾಡ್ ನ್ನು ತೆಗೆದು ಪೊಲೀಸರಿಗೆ ನೀಡಿದ್ದು ಅದನ್ನು ಪೊಲೀಸರು ಮಹಜರು ಮಾಡಿ ಸ್ವಾಧೀನಪಡಿಸಿಕೊಂಡಿರುತ್ತಾರೆ. ಸದ್ರಿ ಮಹಜರಿಗೆ ನನ್ನ ಸಮಕ್ಷಮ ಚಾಸಾ-9 ರವರು ಸಹಿ ಮಾಡಿರುತ್ತಾರೆ. ಸಾಕ್ಷಿಯು ದಿಃ21.12.2022 ರಂದು ನಡೆಸಿದ ಸ್ವತ್ತು ಸ್ವಾ ಧೀನ ಮಹಜರು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-26 ಎಂದು, ಸಾಕ್ಷಿಯ ಸಹಿಯನ್ನು ನಿಪಿ-26(ಎ) ಎಂದು ಗುರುತಿಸಲಾಯಿತು. ಸಾಕ್ಷಿಯು ಮಹಜರು

ಸಮಯ ತೆಗೆದ 5 ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಒಟ್ಟಾಗಿ ನಿಪಿ-27 ಎಂದು ಗುರುತಿಸಲಾಯಿತು. ಸ್ವಾಧೀನಪಡಿಸಿಕೊಂಡ ಕಬ್ಬಿಣದ ರಾಡನ್ನು ನೋಡಿದರೆ ಗುರುತಿಸಬಹುದು. ಸಾಕ್ಷಿಯು ಕಬ್ಬಿಣದ ರಾಡ್ ನ ಭಾವಚಿತ್ರವನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ-28 ಎಂದು ಗುರುತಿಸಲಾಯಿತು.

ದಿಃ22.02.2023 ರಂದು ಕಳುವಾದ ಚಿನ್ನವನ್ನು ಬಿಡುಗಡೆ ಮಾಡುವ ಸಂದರ್ಭದಲ್ಲಿ ಪೊಲೀಸರು ಠಾಣೆಗೆ ಕರೆಸಿರುತ್ತಾರೆ. ಆ ಸಂದರ್ಭ ಚಾಸಾ-1 ಮತ್ತು ಚಾಸಾ-6 ರವರು ಇದ್ದರು. ಪೊಲೀಸರು ಸದ್ರಿ ಸಮಯ ಮಹಜರನ್ನು ಮಾಡಿ ಸಹಿಯನ್ನು ಪಡೆದುಕೊಂಡಿರುತ್ತಾರೆ. ಸದ್ರಿ ಸಮಯ ಚಾಸಾ-1 ರವರು 13 ಚಿನ್ನದ ಆಭರಣಗಳನ್ನು ಬಿಡುಗಡೆ ಮಾಡಿಕೊಂಡಿರುತ್ತಾರೆ. ಸಾಕ್ಷಿಯು ಸದ್ರಿ ಮಹಜರು ಹಾಗೂ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ್ದು ಸದ್ರಿ ಮಹಜರನ್ನು ಈಗಾಗಲೇ ನಿಪಿ-6 ಎಂದು ಗುರುತಿಸಲಾಗಿದ್ದು ಸಾಕ್ಷಿಯ ಸಹಿಯನ್ನು ನಿಪಿ-6(ಸಿ) ಎಂದು ಗುರುತಿಸಲಾಯಿತು. ಆ ಸಂದರ್ಭದಲ್ಲಿ ಬಿಡುಗಡೆ ಮಾಡಿದ ಚಿನ್ನಾಭರಣಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯ ಚಿನ್ನಾಭರಣಗಳ ಭಾವಚಿತ್ರ ಹಾಗೂ ಮಹಜರು ಸಮಯ ತೆಗೆದ ಭಾವಚಿತ್ರಗಳನ್ನು ನೋಡಿ ಗುರುತಿಸಿದ್ದು ಸದ್ರಿ ಭಾವಚಿತ್ರಗಳನ್ನು ಈಗಾಗಲೇ ನಿಪಿ-7 ರಿಂದ 20 ಎಂದು ಗುರುತಿಸಲಾಗಿರುತ್ತದೆ.

ಈ ಹಂತದಲ್ಲಿ 1 ನೇ ಆರೋಪಿಯಿಂದ ವಶಪಡಿಸಿಕೊಂಡ ಕಬ್ಬಿಣದ ರಾಡ್ ನ್ನು ಗುರುತಿಸುವ ಸಲುವಾಗಿ ಮುಂದುವರಿದ ಮುಖ್ಯ ವಿಚಾರಣೆಯನ್ನು ಮುಂದೂಡಲಾಯಿತು.

ನನ್ನ ಉಕ್ತಲೇಖನಾ ರೀತ್ಯಾ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ